ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : 2021-22ನೇ ಸಾಲಿನಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಕಛೇರಿ ಕಟ್ಟಡಗಳ ನಿರ್ಮಾಣದ ಲೆಕ್ಕ ಶೀರ್ಷಿಕೆ 2515-00-101-0-29(ಲಿಂಕ್ ಕೋಡ್ 2515-00-196-0-14)ರಡಿ ಜಿಲ್ಲಾ ಪಂಚಾಯತ್ ಗಳಿಗೆ ಮೂರನೆ ಕಂತಿನ ಅನುದಾನ ಬಿಡುಗಡೆ ಮಾಡುವ ಕುರಿತು.

ಉಲ್ಲೇಖ :

1. ಸರ್ಕಾರದ ಆದೇಶ ಸಂಖ್ಯೆ: ಕೆಪಿಆರ್‌ಸಿ/ಡಿಡಿ4/ಪಿಬಿ/12/2021, ದಿನಾಂಕ: 23.08.2021.
2. ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ ರವರ ಅಧಿಕೃತ ಜ್ಞಾಪನ ಸಂ: FD 02 BPE 2021, ಬೆಂಗಳೂರು, ದಿನಾಂಕ:01.04.2021.

ಪ್ರಸ್ತಾವನೆ:

2021-22ನೇ ಸಾಲಿಗೆ ಪಂಚಾಯತ್ ರಾಜ್ ಸಂಸ್ಥೆಗಳ ಕಛೇರಿ ಕಟ್ಟಡಗಳ ನಿರ್ಮಾಣ ಯೋಜನೆಯ ಲೆಕ್ಕ ಶೀರ್ಷಿಕೆ 2515-00-101-029(ಲಿಂಕ್ ಕೋಡ್ 2515-00-196-0-14)ರಡಿ ರಾಜ್ಯ ಆಯವ್ಯಯದಡಿ ರೂ.3708.00 ಲಕ್ಷಗಳನ್ನು ನಿಗದಿಪಡಿಸಿದೆ. ನಿಗದಿಪಡಿಸಿದ ಅನುದಾನ ರೂ.3708.00 ಲಕ್ಷಗಳಿಗೆ ಸಂಬಂಧಿಸಿದಂತೆ ಆರ್ಥಿಕ ಗುರಿಯನ್ನು ಮೇಲೆ ಓದಲಾದ (2)ರ ಪತ್ರದಲ್ಲಿ ಜಿಲ್ಲೆಗಳಿಗೆ ನಿಗದಿಪಡಿಸಿದೆ.

ಮೇಲೆ ಓದಲಾದ (1)ರ ಆದೇಶದಲ್ಲಿ ಎರಡನೇ ಕಂತಿನ ಅನುದಾನ ರೂ. 927.00ಲಕ್ಷಗಳನ್ನು ಸಂಬಂಧಿಸಿದ ಷರತ್ತುಗಳಿಗೆ ಒಳಪಟ್ಟು ಜಿಲ್ಲಾ ಪಂಚಾಯತ್ ಗಳಿಗೆ ಬಿಡುಗಡೆ ಮಾಡಿದೆ.

ಪ್ರಸ್ತುತ ಪಂಚಾಯತ್ ರಾಜ್ ಸಂಸ್ಥೆಗಳ ಕಛೇರಿ ಕಟ್ಟಡಗಳ ನಿರ್ಮಾಣ ಯೋಜನೆಯಡಿ ಜಿಲ್ಲಾ ಪಂಚಾಯತ್ ಗಳ ವ್ಯಾಪ್ತಿಯಲ್ಲಿ ಅನುಮೋದಿತ ಕ್ರಿಯಾ ಯೋಜನೆಯಲ್ಲಿ ಮುಂದುವರಿದ / ಪೂರ್ಣಗೊಂಡ ಕಾಮಗಾರಿಗಳ ನಿರ್ಮಾಣ ಹಾಗೂ ನಿರ್ವಹಣೆಗೆ ಸಂಬಂಧಿಸಿದಂತೆ ರೂ.927.00 ಲಕ್ಷಗಳನ್ನು ಮೂರನೆ ಕಂತಿನ ಅನುದಾನವನ್ನಾಗಿ ಎಲ್ಲಾ ಜಿಲ್ಲಾ ಪಂಚಾಯತ್ ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳವರಿಗೆ ಬಿಡುಗಡೆ ಮಾಡಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೆಪಿಆರ್ ಸಿ-ಡಿಡಿ4ಪಿಬಿ/12/2021, ಬೆಂಗಳೂರು, ದಿನಾಂಕ 09.11.2021.**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ 2021-22ನೇ ಸಾಲಿಗೆ ಸಂಬಂಧಿಸಿದಂತೆ ಪಂಚಾಯತ್ ರಾಜ್ ಸಂಸ್ಥೆಗಳ ಕಛೇರಿ ಕಟ್ಟಡಗಳ ನಿರ್ಮಾಣ ಯೋಜನೆಯ ಲೆಕ್ಕ ಶೀರ್ಷಿಕೆ 2515-00-101-029(ಲಿಂಕ್ ಕೋಡ್ 2515-00-196-0-14)ರಡಿ ಜಿಲ್ಲಾ ಪಂಚಾಯತ್ ಗಳ ವ್ಯಾಪ್ತಿಯಲ್ಲಿ ಬರುವ ಅನುಮೋದಿತ ಕ್ರಿಯಾ ಯೋಜನೆಯಲ್ಲಿನ ವೆಚ್ಚ ಭರಿಸಲು ಮೂರನೆ ಕಂತಿನ ಅನುದಾನ ರೂ. 927.00 **(ಒಂಬೈನೂರ ಇಪ್ಪತ್ತೇಳು ಲಕ್ಷ ರೂಪಾಯಿಗಳು ಮಾತ್ರ)** ಲಕ್ಷಗಳನ್ನು ಇದರೊಂದಿಗೆ ಲಗತ್ತಿಸಿದ ಅನುಬಂಧದಲ್ಲಿ ಹಂಚಿಕೆ ಮಾಡಿದಂತೆ ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಈ ಕೆಳಕಂಡ ಷರತ್ತುಗೊಳಪಟ್ಟು ಬಿಡುಗಡೆ ಮಾಡಿ ಆದೇಶಿಸಿದೆ.

**ಷರತ್ತುಗಳು:**

1. 2021-22ನೇ ಸಾಲಿನಲ್ಲಿ ಜಿಲ್ಲೆಗೆ ನಿಗದಿಪಡಿಸಿದ ಅನುದಾನಕ್ಕೆ ಕ್ರಿಯಾ ಯೋಜನೆ ತಯಾರಿಸಿ ಜಿಲ್ಲಾ ಪಂಚಾಯತಿ ಸಾಮಾನ್ಯ ಸಭೆಯ ಅನುಮೋದನೆ ಪಡೆದು ಕ್ರಿಯಾ ಯೋಜನೆಯನ್ನು ಸರ್ಕಾರದ ಮಂಜೂರಾತಿಗಾಗಿ ಸಲ್ಲಿಸುವುದು.

2. ಹಾಲಿ ಬಿಡುಗಡೆ ಮಾಡುತ್ತಿರುವ ಅನುದಾನವನ್ನು ಕ್ರಿಯಾ ಯೋಜನೆಯಡಿ ಅನುಮೋದಿಸಿದ ಕಾಮಗಾರಿಗಳಿಗೆ ಮಾತ್ರ ವಿನಿಯೋಗಿಸತಕ್ಕದ್ದು.
3. ಪಂಚಾಯತ್ ರಾಜ್ ಸಂಸ್ಥೆಗಳ ಕಚೇರಿ ಕಟ್ಟಡಗಳ ನಿರ್ಮಾಣದ ಯೋಜನೆಯಡಿ ನಿಗದಿಪಡಿಸಿದ ಆರ್ಥಿಕ ಗುರಿ ಹಾಗೂ ಭರಿಸಲಾದ ವೆಚ್ಚವನ್ನು ನಿಗದಿತ ಸಮಯದಲ್ಲಿ ಅವಲೋಕನ ತಂತ್ರಾಂಶದಡಿ ಇಂಧೀಕರಿಸುವುದು ಹಾಗೂ ಪ್ರಗತಿ ವರದಿಗಳನ್ನು ನಿಗದಿತ ನಮೂನೆಯಲ್ಲಿ ಸರ್ಕಾರಕ್ಕೆ ಸಲ್ಲಿಸುವುದು.
4. ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿಯನ್ನು ಸಕ್ಷಮ ಪ್ರಾಧಿಕಾರದಿಂದ ಪಡೆಯುವುದು.
5. ಕಾಮಗಾರಿಗಳ ವಿವರವನ್ನು ಕಡ್ಡಾಯವಾಗಿ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ವಿವರ ಹಾಗೂ ಛಾಯ ಚಿತ್ರಗಳನ್ನು ಅಳವಡಿಸಿದ ನಂತರವೇ ಬಿಲ್ಲುಗಳನ್ನು ಪಾವತಿಸಬೇಕು.
6. ಯೋಜನೆಯಡಿ ಬಿಡುಗಡೆ ಮಾಡಿದ ಅನುದಾನಕ್ಕೆ 31ನೇ ಮಾರ್ಚ್ 2022ರ ಅಂತ್ಯದೊಳಗೆ ಪೂರ್ಣ ಪ್ರಮಾಣದಲ್ಲಿ ವೆಚ್ಚ ಭರಿಸಿ ಹಣ ಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸುವುದು.
7. ಜಿಲ್ಲಾ ಪಂಚಾಯತಿ ಕಟ್ಟಡ ಮತ್ತು ನಿರ್ವಹಣೆಗೆ ಸಂಬಂಧಿಸಿದ ಕಾಮಗಾರಿಗಳನ್ನು ಅನುಷ್ಠಾನ ಎಜೆನ್ಸಿಗಳಾದ ಕೆ.ಆರ್.ಐ.ಡಿ.ಎಲ್/ಪಿ.ಆರ್.ಇ.ಡಿ/ ನಿರ್ಮಿತಿ ಕೇಂದ್ರ ಈ ಮೂರು ಸಂಸ್ಥೆಗಳಲ್ಲಿ ಯಾವುದಾದರೂ ಒಂದು ಸಂಸ್ಥೆಗೆ ವಹಿಸುವುದು.
8. ನಗದು ಪುಸ್ತಕ ನಿರ್ವಹಣೆ, ಬ್ಯಾಂಕ್ ಪುಸ್ತಕಗಳ ನಿರ್ವಹಣೆ ಮತ್ತು KTPP ಕಾಯ್ದೆ, ಕರ್ನಾಟಕ ಆರ್ಥಿಕ ಸಂಹಿತೆ ಮತ್ತು ಕರ್ನಾಟಕ ಖಜಾನೆ ಸಂಹಿತೆ ನಿಯಮಗಳನ್ನು ಯಾವುದೇ ಕಾರಣಕ್ಕೂ ಉಲ್ಲಂಘನೆಯಾಗದಂತೆ ಕ್ರಮವಹಿಸುವುದು.
9. ಈ ಯೋಜನೆಯಡಿ ಮೀಸಲಿಟ್ಟಿರುವ ಅನುದಾನವನ್ನು ಜಿಲ್ಲಾ ವಲಯ ಲೆಕ್ಕ ಶೀರ್ಷಿಕೆ 2515-00-101-0-29(ಲಿಂಕ್ ಕೋಡ್ 2515-00-196-1-14)ರಡಿ ಭರಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ.ರೇವಣಪ್ಪ)
ನಿರ್ದೇಶಕರು(ಗ್ರಾಮೂಸೌ-2)ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
3. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್)ರವರ ಆಪ್ತ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ
5. ವಿಶೇಷಾಧಿಕಾರಿ, ಇಲಾಖಾ ಗಣಕ ಕೇಂದ್ರ, ಗ್ರಾಅಪ ಇಲಾಖೆ.
6. ಆಯುಕ್ತರ ಆಪ್ತ ಸಹಾಯಕರು, KPRC, RDPR,ಬೆಂಗಳೂರು.
7. ನಿರ್ದೇಶಕರು(ಆಡಳಿತ-2) ರವರು ಆಪ್ತ ಸಹಾಯಕರು, KPRC, RDPR, ಬೆಂಗಳೂರು.
8. ರಕ್ಷಾ ಕಡತಕ್ಕೆ/ ಹೆಚ್ಚುವರಿ ಪ್ರತಿ

# ಅನುಬಂಧ

| | ಜಿಲ್ಲೆಯ ಹೆಸರು | ಜಿಲ್ಲೆಯ ಕೋಡ್ | ಡಿಡಿಒ ಕೋಡ್ | ಮಾಹೆಯ ಬಿಡುಗಡೆ (ರೂ. ಲಕ್ಷಗಳಲ್ಲಿ) | | | ಮೂರನೇ ತ್ರೈಮಾಸಿಕ ಅನುದಾನ ಒಟ್ಟು ಬಿಡುಗಡೆ (ರೂ. ಲಕ್ಷಗಳಲ್ಲಿ) |
|---|---|---|---|---|---|---|---|
| | | | | ಅಕ್ಟೋಬರ್-21 | ನವೆಂಬರ್-21 | ಡಿಸೆಂಬರ್-21 | |
| 1 | ಬಾಗಲಕೋಟೆ | 461 | 2900ZZ0001 | 12.50 | 12.50 | 12.50 | 37.50 |
| 2 | ಬಳ್ಳಾರಿ | 418 | 3400ZZ0001 | 18.33 | 18.33 | 18.34 | 55.00 |
| 3 | ಬೆಳಗಾವಿ | 413 | 2200ZZ0002 | 13.33 | 13.33 | 13.34 | 40.00 |
| 4 | ಬೆಂಗಳೂರು ಗ್ರಾ | 402 | 0300ZZ0001 | 16.70 | 16.70 | 16.60 | 50.00 |
| 5 | ಬೆಂಗಳೂರು ನಗರ | 401 | 0100ZZ8001 | 56.25 | 56.25 | 56.25 | 168.75 |
| 6 | ಬೀದರ್ | 419 | 3800ZZ5701 | 5.00 | 5.00 | 5.00 | 15.00 |
| 7 | ಚಾಮರಾಜನಗರ | 456 | 1000ZZ0001 | 4.58 | 4.58 | 4.59 | 13.75 |
| 8 | ಚಿಕ್ಕಬಳ್ಳಾಪುರ | 453 | 0600ZZ0001 | 2.50 | 2.50 | 2.50 | 7.50 |
| 9 | ಚಿಕ್ಕಮಗಳೂರು | 408 | 1800ZZ0017 | 3.75 | 3.75 | 3.75 | 11.25 |
| 10 | ಚಿತ್ರದುರ್ಗ | 403 | 1600ZZ0001 | 5.41 | 5.41 | 5.43 | 16.25 |
| 11 | ದ.ಕನ್ನಡ | 409 | 1900ZZ0047 | 20.00 | 20.00 | 20.00 | 60.00 |
| 12 | ದಾವಣಗೆರೆ | 451 | 1700ZZ0002 | 8.41 | 8.41 | 8.43 | 25.25 |
| 13 | ಧಾರವಾಡ | 415 | 2500ZZ8798 | 8.50 | 8.50 | 8.50 | 25.50 |
| 14 | ಗದಗ್ | 462 | 2600ZZ0001 | 5.83 | 5.83 | 5.84 | 17.50 |
| 15 | ಹಾಸನ | 410 | 1300ZZ0003 | 13.33 | 13.33 | 13.34 | 40.00 |
| 16 | ಹಾವೇರಿ | 463 | 2700ZZ0001 | 6.25 | 6.25 | 6.25 | 18.75 |
| 17 | ಕಲಬುರಗಿ | 417 | 3200ZZ0003 | 6.25 | 6.25 | 6.25 | 18.75 |
| 18 | ಕೊಡಗು | 411 | 1200ZZ0001 | 8.33 | 8.33 | 8.34 | 25.00 |
| 19 | ಕೋಲಾರ | 404 | 0700ZZ8002 | 4.58 | 4.58 | 4.59 | 13.75 |
| 20 | ಕೊಪ್ಪಳ | 466 | 1500ZZ0010 | 2.50 | 2.50 | 2.50 | 7.50 |
| 21 | ಮಂಡ್ಯ | 412 | 1100ZZ0001 | 5.00 | 5.00 | 5.00 | 15.00 |
| 22 | ಮೈಸೂರು | 407 | 0900ZZ0001 | 5.00 | 5.00 | 5.00 | 15.00 |
| 23 | ರಾಯಚೂರು | 420 | 3600ZZ0001 | 23.33 | 23.33 | 23.34 | 70.00 |
| 24 | ರಾಮನಗರ | 452 | 0400ZZ0001 | 5.00 | 5.00 | 5.00 | 15.00 |
| 25 | ಶಿವಮೊಗ್ಗ | 405 | 1400ZZ0002 | 4.58 | 4.58 | 4.59 | 13.75 |
| 26 | ತುಮಕೂರು | 406 | 0800ZZ0001 | 6.25 | 6.25 | 6.25 | 18.75 |
| 27 | ಉತ್ತರ ಕನ್ನಡ | 416 | 3000ZZ0080 | 5.41 | 5.41 | 5.43 | 16.25 |
| 28 | ಉಡುಪಿ | 457 | 2000ZZ0001 | 5.00 | 5.00 | 5.00 | 15.00 |
| 29 | ವಿಜಯಪುರ | 414 | 2800ZZ9152 | 20.83 | 20.83 | 20.84 | 62.50 |
| 30 | ಯಾದಗಿರಿ | 421 | 3300ZZ0001 | 6.25 | 6.25 | 6.25 | 18.75 |
| | ಒಟ್ಟು | | | 308.98 | 308.98 | 309.04 | **927.00** |

Director (RI-II) & Ex. Officio
Joint Secretary to the Govt.
Rural Development & Panchayath Raj Department
Bangalore